ಇನಾಂ ಇಲಾಖಾ.

ಇ ಸ್ತಿ ಹಾ ರ್.

ತಾರೀಖು 15ನೇ ಡಿಸೆಂಬರ್ 1896.

(ನಂಬರ್ 3.)

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಚನ್ನರಾಯಪಟ್ಣ ತಾಲ್ಲೂಕಿನಲ್ಲಿ ಇರತಕ್ಕ ಜಿಲ್ಲರೆ ಇನಾಂಗಳ ಬಾಬತು (856) ಫೈನಲ್ ಟೈಟಲ್ ಡೀಡಿಯಾನೆ ಕಾಯಂ ಪಟ್ಟೆಗಳು ಹಾಸ್ಯ ಡಿಸ್ಟ್ರಿಕ್ಟು ಜೆಪ್ಯುಟಿ ಕಮ್ಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್‌ದಾರ್‌ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್‌ಗಳು ಬಂದಮೇಲೆ ಅವುಗಳನ್ನು ತೆಗೆದುಕೊಳ್ಳುವ ಬಗ್ಯೆ ಸದರೀ ಇನಾಂದಾರ್‌ರು ಐಜ್ಞ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್‌ರು ಅಂಥಾ ನೋಟೀಸ್‌ಗಳನ್ನ ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರೀ ಜಿಲ್ಲರೆ ಇನಾಂಗಳ ಬಗ್ಯೆ ಈ ಆಫಿಸಿನಿಂದ ಮೊದಲೆ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟ್ಟ್ಲಮೆಂಟ್ಸ್.

ನಂದೀದುರ್ಗದ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 214.

ಮೃತಪಟ್ಟ ನಂಜಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್‌ರು ದೊಡ್ಡಬಳ್ಳಾಪುರದ ಕಸಬಾದಲ್ಲಿರುವ ನೀಲಕಂಠಪ್ಪ ಮೈನರ್, ಗಾರ್ಡಿಯ್ಯ ಇವನ ಚಿಕ್ಕಪ್ಪ ವೀರಪ್ಪ, ಮೃತ ಪಟ್ಟ ಸದರೀ ನಂಜಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರ ಮೇಲೆ ಡಿಟೋ ಸ್ಥಳದ ನೀಲಕಂಠಪ್ಪ ಮೈನರ್, ಗಾರ್ಡಿಯ್ಯ ವೀರಪ್ಪ ಡಿಟೊ ಸ್ಥಳದ ವಾಸಸ್ಥರಾಗಿ ಮೃತಪಟ್ಟ ನಂಜಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೀರಪ್ಪನವರ ಅರ್ಜಿಯನ್ನು ಸ್ಯ 1897ನೇ ಇಸವಿ ಜನವರಿ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನವರ ಆಸ್ತಿಗೆ ಹಕ್ಕು ದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1896ನೇ ಇಸವಿ ಡಿಸೆಂಬರ್ ತಿಂಗಳ 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1896—97ನೇ ಇಸವಿ ಮಿ॥ ಅರ್ಜಿ ನಂಬರ್ 215.

ಮೃತಪಟ್ಟ ಆನಂತಾಚಾರ್ರ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಬೆಂಗಳೂರು ಹಲಸೂರು ಪೇಟೇಲಿರುವ ರಾಜಮ್ಮನು, ಮೃತಪಟ್ಟ ಸದರೀ ಆನಂತಾಚಾರಿಗೆ ಹೆಂಡತಿ ಆಗಬೇಕೆಂ ಬ ಹಕ್ಕುದಾರಿ ಮೇಲೆ ಡಿಟೋ ಸ್ಥಳದ ರಾಜಮ್ಮನು, ಡಿಟೋ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಚೀಫ್ ಕೋರ್ಟ್ ಲೆಟ್ ಹೆಡ್ ಟ್ರಾ ನ್ಸ್‌ಲೇಟರ್ ಆನಂತಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ರಾಜಮ್ಮನ ಅರ್ಜಿಯನ್ನು ಸ್ಯ 1897ನೇ ಇಸವಿ ಜನವರಿ ತಿಂಗಳ ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಆನಂತಾಚಾರ್ರ ಆಸ್ತಿಗೆ ಹ ಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1896ನೇ ಇಸವಿ ಡಿಸೆಂಬರ್ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರಸ್,
ಡಿಸ್ಟ್ರಿಕ್ಟ್ ಜಡ್ಜ್.

ಇಸ್ತಿಹಾರ್‌ನಾಮೆ.

ತಾರೀಖು 21ನೇ ಡಿಸೆಂಬರ್ 1896ನೇ ಇಸವಿ.

ಜೆರ್ಮಾಕ್ಕೆ ಹದ ಕೊಡತಕ್ಕ ಬಗ್ಯೆ ಉಪಯೋಗಿಸಲ್ಪಡುವ ತಂಗಡಿ ಪಗ್ಯೆರೆ ಜೆಕ್ಕೆಯನ್ನು ಸರಕಾರದ ಅಪ್ಪಣೆ ಸಿವಾಯಿ ಜನಾಯಿಸಿಕೊಂಡು ವ್ಯಾಪಾರ ನಡಿಸುತ್ತಾ ಇದ್ದ ಒಬ್ಬ ಮನುಷ್ಯನ ಮೇಲೆ ಕ್ರಿಮಿನಲ್ ತರಫ್ ಪ್ರಾಸಿಕ್ಯೂಷ್ಯನ್ ನಡಿಸಿ ಸಿಕ್ಷೆ ವಿಧಿಸಿ ದ ಮೊಕದ್ದಮೆಯಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕು ಬೆಂಡಿಗಾನಹಳ್ಳಿ ಗ್ರಾಮದ ದೊಡ್ಡೇಗವ್ವಡೆನೆಂಬವನು ಸರ ಕಾರಕ್ಕೆ ಮಾಡಿದ ಮೆಹನತ್ತಿಗೋಸ್ಕರ ಫಾರೆಸ್ಟ್ಸ್ ಸ್ಯ ಸರ್ವೇಟರ್ ಯವರು ಸಿಫಾರ್ಸು ಮೇಲೆ ಗವರ್ಮೆಂಟಿನವರು ಮೆಹರ್ಬಾ ನ್ ಮಾಡಿ ಸದರೀ ದೊಡ್ಡೇಗವ್ವಜನಿಗೆ ಸ್ಪೆಷಲ್ ಕೇಸ್ ತರಕ್ಕ 50 ರೂಪಾಯಿ ಇನಾಂ 1896ನೇ ಇಸವಿ ಸೆಪ್ಟಂಬರ್ 14ನೇ ತಾರೀಖಿನ 2907—8 ಫಾ. ಫೈ. 107—95ನೇ ನಂಬರ್ ಪ್ರೊಸಿಡಿಂಗ್ಸ್‌ನಲ್ಲಿ ಸ್ಯಾಂಕ್ಷನ್ ಮಾಡಿ ಇರುವ ಸಂಗತಿ ಸಕಲರ ತಿಳುವಳಿಕೆ ಬಗ್ಯೆ ಈ ಮೂಲ ಕ ಪ್ರಸಿದ್ಧಪಡಿಸಿಧೆ.

ಸಿ. ಅಪ್ಪಯ್ಯ,
ಫಾರ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್.